# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 768
ಉತ್ತರಿಸಬೇಕಾದ ದಿನಾಂಕ : 21.02.2024
ಸದಸ್ಯರ ಹೆಸರು : ಶ್ರೀ ಹೆಚ್.ಎಸ್. ಗೋಪಿನಾಥ್
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ಜಿಲ್ಲೆಯಲ್ಲಿನ ಕಂದಾಯ ಇಲಾಖೆಯಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಅಳವಡಿಸಿರುವ ತಂತ್ರಾಂಶಗಳಾವುವು; (ವಿವರ ನೀಡುವುದು) | ಕಂದಾಯ ಇಲಾಖೆಯಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಅಳವಡಿಸಿರುವ ತಂತ್ರಾಂಶಗಳ ವಿವರಗಳು:-<br><br>**ಭೂಮಿ ಉಸ್ತುವಾರಿ ಕೋಶ ವಿಭಾಗ**<br><br>**1.** ಭೂದಾಖಲೆಗಳ ನಿರ್ವಹಣೆಯನ್ನು ಡಿಜಿಟಲೀಕರಣ ಗೊಳಿಸುವ ನಿಟ್ಟಿನಲ್ಲಿ ಭೂಮಿ ಉಸ್ತುವಾರಿ ಕೋಶವು ಕೃಷಿ ಜಮೀನಿಗೆ ಸಂಬಂಧಿಸಿದಂತೆ ಪೌತಿ ಮೊದಲಾದ ನೋಂದಾಯಿತವಲ್ಲದ ಹಾಗೂ ಕ್ರಯ, ವಿಭಾಗ, ದಾನ ಇತ್ಯಾದಿ ನೋಂದಾಯಿತ ದಸ್ತಾವೇಜುಗಳಿಗೆ ಸಂಭಂದಿಸಿದ ಖಾತಾ ಬದಲಾವಣೆ, ಮತ್ತು ಪಹಣಿ ಇಂಡೀಕರಣ ಪ್ರಕ್ರಿಯೆಯ ನಿರ್ವಹಣೆಗಾಗಿ ಭೂಮಿ ತಂತ್ರಾಂಶ ಅಭಿವೃದ್ಧಿಪಡಿಸಿ ರಾಜ್ಯಾದ್ಯಂತ ಅಳವಡಿಸಲಾಗಿದೆ.<br><br>**2.** ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಲು ಹಾಗೂ ಭೂ ಪರಿವರ್ತನೆ ಆದ ಉದ್ದೇಶವನ್ನು ಬದಲಾವಣೆ ಮಾಡಲು ಭೂ ಪರಿವರ್ತನ ತಂತ್ರಾಂಶವನ್ನು ಅಳವಡಿಸಲಾಗಿದೆ.<br><br>**3.** ಭೂ ದಾಖಲೆಗಳ ಆಧುನೀಕರಣ ಯೋಜನೆಯ ಮೂಲಕ ರಾಜ್ಯದ ಕಂದಾಯ ಕಛೇರಿಗಳ ಅಭಿಲೇಖಾಲಯ ಶಾಖೆಯಲ್ಲಿನ ಕಂದಾಯ ದಾಖಲೆಗಳನ್ನು ಡಿಜಿಟಲೈಜೇಷನ್ ಮಾಡುವ ಮೂಲಕ ಶಾಶ್ವತವಾಗಿ ಸಂರಕ್ಷಿಸಲು ಕ್ರಮವಹಿಸಲಾಗುತ್ತಿದೆ.<br><br>**4.** ಆಧಾರ್ ಸೀಡಿಂಗ್:ಪಹಣಿ ಪತ್ರಿಕೆಗಳಿಗೆ ವಾರಸುದಾರರ ಆಧಾರ್ ನಂಬರ್ ಅನ್ನು ಲಿಂಕ್ ಮಾಡುವ ಯೋಜನೆಯ ಮೂಲಕ ರಾಜ್ಯದ ಎಲ್ಲಾ ಭೂದಾಖಲೆಗಳಿಗೆ ನೈಜತೆಯನ್ನು ಒದಗಿಸಿ, ಸರ್ಕಾರದ ರೈತಪರ ಯೋಜನೆಗಳನ್ನು ಅತ್ಯಂತ |

ನಿಖರ ಮತ್ತು ಶೀಘ್ರವಾಗಿ ರೈತರಿಗೆ ತಲುಪಿಸಲು ಸಾಧ್ಯವಾಗಲಿದೆ. (ನಾಗರೀಕರು ಕೂಡಾ ಲಿಂಕ್ ಮಾಡಬಹುದು.

https://landrecords.karnataka.gov.in/service4/)

**5**. ಬಗ್ಗೈರ್ ಹುಕುಂ Form-50, 53, ಹಾಗೂ ಇನಾಂಗೆ ಸಂಬಂಧಪಟ್ಟಂತೆ ಗಣಕೀಕರಣ ತಂತ್ರಾಂಶವನ್ನು ಅಭಿವೃದ್ಧಿಪಡಿಸಿದ್ದು ಮುಂದಿನ ದಿನಗಳಲ್ಲಿ ಇ-ಸಾಗುವಳಿ ಚೀಟಿ ನೀಡುವ ಪ್ರಕ್ರಿಯೆಯನ್ನು ತಂತ್ರಾಂಶದಲ್ಲಿಯೇ ಮಾಡಲು ಉದ್ದೇಶಿಸಲಾಗಿದೆ.

**6.** ಸರ್ಕಾರಿ ಜಮೀನುಗಳ ಗುರುತಿಸುವಿಕೆ, ಸಂರಕ್ಷಣೆ ಉದ್ದೇಶದಿಂದಾಗಿ ನಿರಂತರ ಮೇಲ್ವಿಚಾರಣೆ ಮಾಡಲು 'ಬೀಟ್' ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲಾಗಿದೆ. ಇದರಿಂದಾಗಿ ಅತ್ಯಮೂಲ್ಯ ಸರ್ಕಾರಿ ಜಮೀನುಗಳು ಅಕ್ರಮ ಒತ್ತುವರಿಯಿಂದ ಮುಕ್ತ ಮಾಡಬಹುದಾಗಿರುತ್ತದೆ.

**ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ**

1) ಮೋಜಿಣಿ:- ಇಲಾಖೆಯಲ್ಲಿ ಅಳತೆ ಕೋರಿ ಸಾರ್ವಜನಿಕರಿಂದ ಸ್ವೀಕೃತವಾಗುವ ಎಲ್ಲಾ ರೀತಿಯ ಅಳತೆ (ನೋಂದಣಿ ಪೂರ್ವ 11ಇ ನಕ್ಷೆ, ತತ್ಕಾಲ್ ಪೋಡಿ, ಅಲಿನೇಷನ್ ಪೂರ್ವ ನಕ್ಷೆ, ಹದ್ದುಬಸ್ತು ಅಳತೆ, ಇ-ಸ್ವತ್ತು) ಅರ್ಜಿಗಳನ್ನು ಮೋಜಿಣಿ ತಂತ್ರಾಂಶದ ಮುಖಾಂತರ ಆನ್-ಲೈನ್ ನಲ್ಲಿ ನಿರ್ವಹಿಸಲಾಗುತ್ತಿದೆ.

2) ಭೂದಾಖಲೆಗಳ ನಕಲು:- ಭೂಮಾಪನ ಇಲಾಖೆಯ ಅಮೂಲ್ಯ ಭೂದಾಖಲೆಗಳಾದ ಟಿಪ್ಪಣಿ ಸಹಿತ ಇತರೆ ವಿವಿಧ ಭೂದಾಖಲೆಗಳನ್ನು ಈಗಾಗಲೇ ಆಧುನಿಕ ತಂತ್ರಜ್ಞಾನದ ಮೂಲಕ ಸ್ಕ್ಯಾನಿಂಗ್ ಮಾಡಿ ಸಂರಕ್ಷಿಸಲಾಗಿದ್ದು, ಸದರಿ ದಾಖಲೆಗಳನ್ನು ಆನ್-ಲೈನ್ ಮೂಲಕ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

**ಅಟಲ್ ಜೀ ಜನಸ್ನೇಹಿ ನಿರ್ದೇಶನಾಲಯ**

ಕಂದಾಯ ಇಲಾಖೆಯ ಅಟಲ್ ಜೀ ಜನಸ್ನೇಹಿ ಕೇಂದ್ರ ಯೋಜನೆಯಡಿ ಸಾರ್ವಜನಿಕ ಅನುಕೂಲಕ್ಕಾಗಿ NADAKACHERI VERSION-4, NADAKACHERI VERSION-5, SMS SERVICE (TO DOWNLOAD THE CERTIFICATE), WEBSITE TO VIEW APPLICATION STATUS and to Check

| | | |
|---|---|---|
| | | the Authenticity of the certificate ತಂತ್ರಾಂಶಗಳನ್ನು ಅಳವಡಿಸಲಾಗಿರುತ್ತದೆ.<br><br>**<u>ಯು.ಪಿ.ಓ.ಆರ್ (URBAN PROPERTY OWNERSHIP RECORDS)</u>**<br><br>ಬೆಂಗಳೂರು ನಗರ ಯು.ಪಿ.ಓ.ಆರ್. ಯೋಜನೆಯಲ್ಲಿ DPR (DRAFT PROPERTY CARD) ಹಾಗೂ FPR (FINAL PROPERTY CARD) ಸಿದ್ಧಪಡಿಸಲು ತಂತ್ರಾಂಶ ಇದ್ದು, ಅಭಿವೃದ್ಧಿಪಡಿಸಲಾಗುತ್ತಿದೆ.<br><br>**<u>ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ</u>**<br><br>ಸಾಮಾಜಿಕ ಭದ್ರತೆ ಮತ್ತು ನಿರ್ದೇಶನಾಲಯದಲ್ಲಿನ ವಿವಿಧ ಪಿಂಚಣಿ ಸಂಬಂಧಿಸಿದ ಫಲಾನುಭವಿಗಳ ದತ್ತಾಂಶ ಪಿಂಚಣಿಗಳ ಯೋಜನೆಗಳಿಗೆ ನಿರ್ವಹಣೆಗಾಗಿ ಬಿ.ಎಂ.ಎಸ್ ತಂತ್ರಾಂಶವನ್ನು (Beneficiary Management System) ಅಳವಡಿಸಿಕೊಳ್ಳಲಾಗಿದ್ದು, ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಲಾಗಿನ್ ಸೃಜಿಸಿ ಸದರಿ ತಂತ್ರಾಂಶವನ್ನು ನಿರ್ವಹಿಸಲಾಗುತ್ತಿದೆ. |
| ಆ | ಕಂದಾಯ ಇಲಾಖೆಯಲ್ಲಿ ಸರ್ವರ್‌ಡೌನ್ ಸಮಸ್ಯೆ ಇದೆ ಎಂದು ಸಿಬ್ಬಂದಿಗಳು ಸಾರ್ವಜನಿಕರಿಗೆ/ ರೈತರಿಗೆ ತೊಂದರೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು) | ರಾಜ್ಯದಲ್ಲಿ ಭೂಮಿ 7.0 ತಂತ್ರಾಂಶ ಚಾಲ್ತಿಯಲ್ಲಿದ್ದು, ಸದರಿ ತಂತ್ರಾಂಶವನ್ನು ಇ-ಆಡಳಿತ ಇಲಾಖೆಯ ಸಮನ್ವಯದೊಂದಿಗೆ ಕರ್ನಾಟಕ ಸ್ಟೇಟ್ ಡೇಟಾ ಸೆಂಟರ್ (KSDC) ನ ಕೇಂದ್ರೀಕೃತ ಸರ್ವರ್ ಮೂಲಕ ನಡೆಸಲಾಗುತ್ತಿದೆ. |
| ಇ | ಇಂತಹ ತೊಂದರೆಗಳನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರನೀಡುವುದು) | ಸರ್ವರ್ ನಿರ್ವಹಣೆ ಸಂದರ್ಭದಲ್ಲಿ ಮಾತ್ರ ಸರ್ವರ್ ಡೌನ್ ಸಮಸ್ಯೆ ಕಂಡುಬರುತ್ತದೆ. ಸಮಸ್ಯೆ ಕಂಡುಬಂದ ಕೂಡಲೇ ಕರ್ನಾಟಕ ಸ್ಟೇಟ್ ಡೇಟಾ ಸೆಂಟರ್ (KSDC) ಮೂಲಕ ಸರ್ವರ್ ಡೌನ್ ಸಮಸ್ಯೆ ಬಗೆಹರಿಸಲಾಗುತ್ತಿದೆ.<br><br>ಇ-ಆಡಳಿತ ಇಲಾಖೆಯೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿದ್ದು, ಪ್ರಸ್ತುತ ಭೂಮಿ ತಂತ್ರಾಂಶಕ್ಕೆ ಸಂಬಂಧಿಸಿದಂತೆ ಯಾವುದೇ ಸರ್ವರ್ ಸಮಸ್ಯೆ ಇರುವುದಿಲ್ಲ. |

ಕಂಇ 40 ಎಂಆರ್‌ಆರ್ 2024

(ಕೃಷ್ಣಬೈರೇಗೌಡ)
ಕಂದಾಯ ಸಚಿವರು